OCTOBER 30, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

<><><>

- **ಸಚಿವ ಸಂಪುಟ ಸಭೆ:** ಧಾರವಾಡ ಜಿಲ್ಲೆ ಹುಬ್ಬಳ್ಳಿಯಲ್ಲಿ, ಅತ್ಯಾಧುನಿಕ ಕ್ರೀಡಾಂಗಣ ನಿರ್ಮಾಣಕ್ಕೆ, ಒಪ್ಪಿಗೆ.
- **ರಾಜ್ಯಾದ್ಯಂತ, 'ಸುರಕ್ಷಿತ್ ಬಚಪನ್',** ಜನಜಾಗೃತಿ ಅಭಿಯಾನ.
- **ನವೆಂಬರ್ 1, ಕನ್ನಡ ರಾಜ್ಯೋತ್ಸವ:** ತನ್ನಿಮಿತ್ತ, ಇಂದಿನಿಂದ ನವೆಂಬರ್ 2ರ ವರೆಗೆ, ರಾಜ್ಯಾದ್ಯಂತ ಪಕ್ಷಿ ಗಣತಿ.
- **ವಿಚಕ್ಷಣಾ ಜಾಗೃತಿ ಅರಿವು ಸಪ್ತಾಹ:** ನವೆಂಬರ್ 1ನೇ ತಾರೀಖು, ಮುಕ್ತಾಯ.

<><><>

ಈಗ ವಾರ್ತೆಗಳ ವಿವರ

<><><>

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅಧ್ಯಕ್ಷತೆಯಲ್ಲಿ, ಬೆಂಗಳೂರಿನಲ್ಲಿ ನಡೆದ, ಸಚಿವ ಸಂಪುಟ ಸಭೆಯಲ್ಲಿ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯಲ್ಲಿ ಸಮಗ್ರ ಕ್ರೀಡಾಂಗಣ ನಿರ್ಮಾಣ ಸೇರಿದಂತೆ, ಒಟ್ಟು 12 ಪ್ರಮುಖ ಯೋಜನೆಗಳಿಗೆ, ಅನುಮೋದನೆ ದೊರೆತಿದೆ.

<><><>

ಹುಬ್ಬಳ್ಳಿ ನಗರದಲ್ಲಿ ಸುಸಜ್ಜಿತ, ಅತ್ಯಾಧುನಿಕ ಕ್ರೀಡಾಂಗಣ ನಿರ್ಮಾಣ ಹಾಗೂ ನಿರ್ವಹಣೆಯನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದ, ಟ್ರಿಪ್ಸ್ ಪಿ ಮಾದರಿಯಲ್ಲಿ, 20 ವ ರ್ಷಗಳ ಅವಧಿಗೆ ವಹಿಸಿಕೊಡಲು, ಸಚಿವ ಸಂಪುಟ ನಿರ್ಧರಿಸಿದೆ. ಕ್ರೀಡಾಪಟುಗಳಿಗೆ ತರಬೇತಿ, ಅಭ್ಯಾಸ ಮತ್ತು ಸ್ಪರ್ಧೆಗಳಲ್ಲಿ ಭಾಗವಹಿಸಲು ಸೂಕ್ತ ವ್ಯವಸ್ಥೆ ಕಲ್ಪಿಸುವುದು ಈ ಯೋಜನೆಯ ಉದ್ದೇಶವಾಗಿದೆ.

<><><>

ಹುಬ್ಬಳ್ಳಿ ನಗರದ, 14 ಎಕರೆ 6 ಗುಂಟೆಯಲ್ಲಿ, ಸುಸಜ್ಜಿತ ಕ್ರೀಡಾಂಗಣ ನಿರ್ಮಾಣವಾಗಲಿದ್ದು, ಅಥ್ಲೆಟಿಕ್ಸ್ ಟ್ರ್ಯಾಕ್ ಮತ್ತು ಫುಟ್‌ಬಾಲ್ ಮೈದಾನ, ಬಾಸ್ಕೆಟ್‌ಬಾಲ್, ವಾಲಿಬಾಲ್ ಹಾಗೂ ಹಾಕಿ ಕ್ರೀಡಾಂಗಣಗಳು, ಒಳಾಂಗಣ ಕ್ರೀಡಾ ಸೌಲಭ್ಯಗಳು, ಈಜುಗೊಳ, ವ್ಯಾಯಾಮ ಶಾಲೆ ಮತ್ತು ಕುದುರೆ ಸವಾರಿ ತರಬೇತಿ ಕೇಂದ್ರ ಹಾಗೂ ಕ್ರೀಡಾ ವಸತಿ ಸೌಲಭ್ಯಗಳನ್ನು, ಅಗತ್ಯ ಮೂಲಸೌಕರ್ಯಗಳೊಂದಿಗೆ ಒದಗಿಸಲು, ಯೋಜಿಸಲಾಗಿದೆ.

<><><>

ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲೂಕು, ಸಂಗೊಳ್ಳಿಯಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆಯ ನಿರ್ಮಾಣಕ್ಕಾಗಿ, 228 ಕೋಟಿ 95 ಲಕ್ಷ ರೂಪಾಯಿಗಳ ಪರಿಷ್ಕೃತ ಅಂದಾಜು ಮೊತ್ತಕ್ಕೆ, ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಪೆಂಡಾರ ಗಲ್ಲಿಯ, ಸರ್ಕಾರಿ ಪ್ರೌಢಶಾಲೆಯಲ್ಲಿ, ಸುರಕ್ಷಿತ್ ಬಚಪನ್ ಜನಜಾಗೃತಿ ಅಭಿಯಾನ, ಜರುಗಿತು. ತಾಲೂಕು ನ್ಯಾಯಾಧೀಶ ವಿಶ್ವನಾಥ ಯಮಕನಮರಡಿ, ಕಾರ್ಯಕ್ರಮ ಉದ್ಘಾಟಿಸಿ, ಮಕ್ಕಳ ಬಾಲ್ಯವನ್ನು ಸುರಕ್ಷಿತವಾಗಿಸಲು, ಇರುವ ಕಾನೂನುಗಳು, ಪೋಕ್ಸೋ ಕಾಯ್ದೆ, ಮಕ್ಕಳ ಸುರಕ್ಷತೆ ಬಗ್ಗೆ, ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರು ಅನುಸರಿಸಬೇಕಾದ, ಮಾರ್ಗಸೂಚಿಗಳ ಕುರಿತು, ಮಾರ್ಗದರ್ಶನ ನೀಡಿದರು. ಹುಬ್ಬಳ್ಳಿ ಶಹರ, ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಎಂ. ಫಡ್ನೇಶಿ ಮಾತನಾಡಿ, 'ಸುರಕ್ಷಿತ್ ಬಚಪನ್ ಅಭಿಯಾನ', ಶಹರದ ಎಲ್ಲ ಶಾಲೆಗಳಲ್ಲಿ ನಡೆಯುತ್ತಿದೆ, ಎಂದರು.

<><><>

ಧಾರವಾಡ ಜಿಲ್ಲೆ, ಅಳ್ನಾವರ ತಾಲೂಕಿನ ಬೆಣಚಿ, ಕಡಬಗಟ್ಟಿ ಹಾಗೂ ಮೈಸೂರು ಭಾಗದ, ಗ್ರಾಮೀಣ ಮತ್ತು ಬುಡಕಟ್ಟು ಸಮುದಾಯದ ಮಕ್ಕಳಿಗೆ, ಸಮಾನ ಶಿಕ್ಷಣಾವಕಾಶ ಕಲ್ಪಿಸುವಲ್ಲಿ, ಸ್ವಾಮಿ ವಿವೇಕಾನಂದ ಯೂತ್ ಮೂವ್ಮೆಂಟ್ ಸಂಸ್ಥೆಗೆ, ಇಂಡಿಯಾ ಚೈಲ್ಡ್‌ಕೇರ್ ಚಾಂಪಿಯನ್ ಪುರಸ್ಕಾರ –2026 – ಅತ್ಯುತ್ತಮ ಸ್ವಯಂಸೇವಾ ಸಂಸ್ಥೆ ಪ್ರಶಸ್ತಿ ದೊರೆತಿದೆ. ಹೊಸ ದಿಲ್ಲಿಯ, ಇಂಡಿಯಾ ಇಂಟರ್‌ನ್ಯಾಶನಲ್ ಸೆಂಟರ್‌ನಲ್ಲಿ, ವಿಶ್ವ ಸಂಸ್ಥೆಯ ಮಹಿಳಾ ಘಟಕದ ಪದಾಧಿಕಾರಿಗಳು, ಈ ಪುರಸ್ಕಾರವನ್ನು ಎಸ್.ವಿ.ವಾಯ್.ಎಂ. ಶಿಕ್ಷಣ ಪ್ರಕಲ್ಪದ ಮುಖ್ಯಸ್ಥರಾದ, ಪ್ರವೀಣಕುಮಾರ ಸಯ್ಯಪರಾಜು ಅವರಿಗೆ, ಪ್ರದಾನಿಸಿದರು. ಸಮುದಾಯ ಆಧಾರಿತ ಶಿಕ್ಷಣ ಪ್ರಕಲ್ಪದ ಮುಖ್ಯಸ್ಥರಾದ, ಮೈಸೂರಿನ ಅವಿತ ಆನಂದರಾಜ್, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಅವಿತ ಆನಂದರಾಜ್ ಧ್ವನಿ 60 ಸೆಕೆಂದುಗಳು

<><><>

ನವೆಂಬರ್ 1, ಕನ್ನಡ ರಾಜ್ಯೋತ್ಸವ ಸಂಭ್ರಮಕ್ಕೆ, ನಾಡಿನ ಪಕ್ಷಿ ಕಾಶಿಯ ಸೊಬಗನ್ನು ಬೆಸೆಯಲು, ಮೊದಲ ಬಾರಿಗೆ, 'ಕರ್ನಾಟಕ ರಾಜ್ಯೋತ್ಸವ ಪಕ್ಷಿ ಗಣತಿ – 2026' ಅಭಿಯಾನ, ಇಂದಿನಿಂದ ನವೆಂಬರ್ 2ರ ವರೆಗೆ, ರಾಜ್ಯಾದ್ಯಂತ ಆಯೋಜಿತವಾಗಿದೆ. ಜನ ವಿಜ್ಞಾನದ ಭಾಗವಾಗಿ, ಜನ ವಿಜ್ಞಾನಿಗಳ ಸಹಕಾರದಲ್ಲಿ, ನಾಡಿನ ಪಕ್ಷಿ ಪ್ರಭೇದ, ಅವುಗಳ ಆವಾಸಸ್ಥಾನ, ರಾಜ್ಯದ ವಿವಿಧ ಭಾಗಗಳಲ್ಲಿ ಇರುವಿಕೆ ಕುರಿತು, ವೈಜ್ಞಾನಿಕ ದತ್ತಾಂಶ ಸಂಗ್ರಹಿಸಲು, ಅರಣ್ಯ ಇಲಾಖೆ ಯೋಜಿಸಿದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ಉತ್ತರಕನ್ನಡ ಜಿಲ್ಲೆ, ಕುಮಟಾದ ಪಕ್ಷಿಮಿತ್ರ, ತಂತ್ರಾಂಶ ತಜ್ಞ, ವಿಘ್ನೇಶ ಭಟ್.

<><><>

ವಿಘ್ನೇಶ ಭಟ್ ಧ್ವನಿ 56 ಸೆಕೆಂದುಗಳು

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಇತಿಹಾಸದ ಅಧ್ಯಯನ ಮತ್ತು ಸಂಶೋಧನೆಯಲ್ಲಿ, ಯುವಜನರು ಹೆಚ್ಚಿನ ಆಸಕ್ತಿ ಬೆಳೆಸಿಕೊಳ್ಳುವಂತೆ, ಡಾಕ್ಟರ್ ಮನಮೋಹನಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ, ಪ್ರೊಫೆಸರ್ ಬಿ. ರಮೇಶ, ಕೋರಿದ್ದಾರೆ. ಭಾರತೀಯ ಇತಿಹಾಸ ಅನುಸಂಧಾನ ಪರಿ ತ್ ಹಾಗೂ ವಿಶ್ವವಿದ್ಯಾಲಯದ ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಆಯೋಜಿಸಿದ್ದ, "ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಲ್ಲಿ ವಿದ್ಯಾರಣ್ಯರ ಪಾತ್ರ: ಇತ್ತೀಚಿನ ಸಂಶೋಧನೆಗಳ ಹಿನ್ನೆಲೆಯಲ್ಲಿ ಐತಿಹಾಸಿಕ ವಿಶ್ಲೇ ಣೆ" ಎಂಬ, ವಿಶೇಷ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು. ತುಮಕೂರು ವಿಶ್ವವಿದ್ಯಾಲಯದ, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಹಾಗೂ ಸಂಶೋಧನಾ ವಿಭಾಗದ, ಪ್ರಾಧ್ಯಾಪಕ ಪ್ರೊಫೆಸರ್ ಎಂ.ಕೊಟ್ರೇಶ, ಭಾರತೀಯ ಇತಿಹಾಸ ಅನುಸಂಧಾನ ಪರಿ ತ್, ದಕ್ಷಿಣ ವಲಯದ, ಪ್ರಾದೇಶಿಕ ನಿರ್ದೇಶಕಿ, ಡಾಕ್ಟರ್ ಎಸ್.ಕೆ. ಅರುಣಿ ಸೇರಿದಂತೆ, ಇತಿಹಾಸ ತಜ್ಞರು, ಪುರಾತತ್ವ'ವಿದರು ಪಾಲ್ಗೊಂಡಿದ್ದರು.

<><><>

ಭ್ರ ಷ್ಟಾಚಾರ ತಡೆ ಕಾಯ್ದೆ – ಕಲಂ 17 ಎ ಪ್ರಕಾರ, ಸಾರ್ವಜನಿಕ ಸೇವಕರ ಮೇಲೆ ಖಾಸಗಿ ದೂರು ದಾಖಲಿಸಲು, ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ, ಪೂರ್ವಾನುಮತಿ ಅಗತ್ಯವಿಲ್ಲ ಎಂದು, ಧಾರವಾಡ ಜಿಲ್ಲೆ ಪ್ರಧಾನ ನ್ಯಾಯಾಧೀಶ ಎನ್. ವಿ. ವಿಜಯ, ತಿಳಿಸಿದ್ದಾರೆ. ಜಿಲ್ಲಾ ಪಂಚಾಯಿತಿ ಸಭಾ ಭವನದಲ್ಲಿ, ವಿಚಕ್ಷಣಾ ಜಾಗೃತಿ ಅರಿವು ಸಪ್ತಾಹ ಉದ್ಘಾಟಿಸಿ, ಮಾತನಾಡಿದರು. ಕೇಂದ್ರ ವಿಚಕ್ಷಣಾ ಆಯೋಗ, 'ಜಾಗೃತಿ ಅರಿವು ಸಪ್ತಾಹ 2026'ನ್ನು, ನಾಡಿದ್ದು ನವೆಂಬರ್ 1ರ ವರೆಗೆ, ಆಯೋಜಿಸಿದೆ. "ಸತ್ಯನಿ ಿಯಿಂದ ಸಮೃದ್ಧಿ" ಧ್ಯೇಯದೊಂದಿಗೆ, ಸರ್ದಾರ ವಲ್ಲಭ ಭಾಯಿ ಪಟೇಲ ಅವರ, ಜನ್ಮದಿನದ ಅಂಗವಾಗಿ, ಈ ಅಭಿಯಾನ ನಡೆಯುತ್ತಿದೆ. ನಾಗರಿಕರು, 'MyGov CVC Pledge' ಮೂಲಕ, ಆನ್'ಲೈನ್'ನಲ್ಲಿ ಪ್ರತಿಜ್ಞೆ ಸ್ವೀಕರಿಸಲು, ಕೋರಲಾಗಿದೆ, ಎಂದರು.

<><><>

ಅಥ್ಲೆಟಿಕ್ಸ್ ಫೆಡರೇಷನ್ ಆಫ್ ಇಂಡಿಯಾ, ಕಳೆದ 15 ಮತ್ತು 16ನೇ ತಾರೀಖು, ಜೈಪುರದಲ್ಲಿ ಆಯೋಜಿಸಿದ್ದ, 23 ವರ್ಷದೊಳಗಿನವರ, ಹಿರಿಯರ ವಿಭಾಗದ, ರಾಷ್ಟ್ರೀಯ ಹರ್ಡಲ್ಸ್, ನಾಲ್ಕನೂರು ಮೀಟರ್ ಓಟದಲ್ಲಿ, ಧಾರವಾಡ ತಾಲೂಕು, ಮುಗಳಿ ಗ್ರಾಮದ, ಯುವ ಕ್ರೀಡಾ ಪ್ರತಿಭೆ, ಪ್ರಿಯಾಂಕಾ ಮಡಿವಾಳಪ್ಪ ಓಲೇಕಾರ, ಬಂಗಾರದ ಪದಕ ಗೆದ್ದಿದ್ದಾರೆ. ಧಾರವಾಡದ, ಜೆ.ಎಸ್.ಎಸ್. ಶ್ರೀ ಮಂಜುನಾಥೇಶ್ವರ ಸ್ನಾತಕ ಮತ್ತು ಸ್ನಾತಕೋತ್ತರ ಮಹಾವಿದ್ಯಾಲಯದಲ್ಲಿ, ಬಿ.ಎ. ಅಂತಿಮ ವರ್ಷದ ವಿದ್ಯಾರ್ಥಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ, ಜಿಲ್ಲಾ ಕ್ರೀಡಾ ವಸತಿ ನಿಲಯದ ಕ್ರೀಡಾಪಟು ಪ್ರಿಯಾಂಕಾ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಪ್ರಿಯಾಂಕಾ ಮಡಿವಾಳಪ್ಪ ಓಲೇಕಾರ ಧ್ವನಿ 47 ಸೆಕೆಂದುಗಳು

<><><>

ಸಂಕ್ಷಿಪ್ತ ಸುದ್ದಿಗಳು:

<><><>

ಹಾಸನದ ಅಧಿದೇವತೆ, ಹಾಸನಾಂಬಾ ದರ್ಶನವನ್ನು, ಇಂದಿನಿಂದ ನವೆಂಬರ್ 10ನೇ ತಾರೀಖಿನ ವರೆಗೆ, ಸಾರ್ವಜನಿಕರು ಪಡೆಯಬಹುದು.

<><><>

ಮೈಸೂರಿನಲ್ಲಿ, ನವೆಂಬರ್ 26 ರಂದು, 'ರಾಜ್ಯ ಮಟ್ಟದ ಸಂವಿಧಾನ ದಿನ' ಜರುಗಲಿದೆ.

<><><>

ಉಡುಪಿ ಜಿಲ್ಲೆ, ಕೊಡವೂರು ಗ್ರಾಮದ ಇಬ್ಬರು ಮೀನುಗಾರರು, ಮಲ್ಪೆ ಬಂದರಿನಲ್ಲಿ ಕಾಲು ಜಾರಿ ಬಿದ್ದು, ಕಾಣೆಯಾಗಿದ್ದಾರೆ.

<><><>

ನಾಳ್ಕನೇ ಹಂತದ, 'ತಂಬಾಕು ಮುಕ್ತ ಯುವ' ರಾಷ್ಟ್ರೀಯ ಅಭಿಯಾನ, 60 ದಿನಗಳ ಕಾಲ ದೇಶಾದ್ಯಂತ ನಡೆಯಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- **ಸಚಿವ ಸಂಪುಟ ಸಭೆ:** ಧಾರವಾಡ ಜಿಲ್ಲೆ ಹುಬ್ಬಳ್ಳಿಯಲ್ಲಿ, ಅತ್ಯಾಧುನಿಕ ಕ್ರೀಡಾಂಗಣ ನಿರ್ಮಾಣಕ್ಕೆ, ಒಪ್ಪಿಗೆ.
- **ರಾಜ್ಯಾದ್ಯಂತ, 'ಸುರಕ್ಷಿತ್ ಬಚಪನ್',** ಜನಜಾಗೃತಿ ಅಭಿಯಾನ.
- **ನವೆಂಬರ್ 1, ಕನ್ನಡ ರಾಜ್ಯೋತ್ಸವ:** ತನ್ನಿಮಿತ್ತ, ಇಂದಿನಿಂದ ನವೆಂಬರ್ 2ರ ವರೆಗೆ, ರಾಜ್ಯಾದ್ಯಂತ ಪಕ್ಷಿ ಗಣತಿ.
- **ವಿಚಕ್ಷಣಾ ಜಾಗೃತಿ ಅರಿವು ಸಪ್ತಾಹ:** ನವೆಂಬರ್ 1ನೇ ತಾರೀಖು, ಮುಕ್ತಾಯ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>